ಮೈಸೂರ ಗೆಜಿಟ್ಟು.

ಸಂ. 42.] ಸರ್ಕಾರದಿಂದ ಪ್ರಾಮಿಷ್ ಆದ್ದು. [ಸಂ. 17.

ಬೆಂಗಳೂರು, ಗುರುವಾರ, ಏಪ್ರಿಲ್ ತಾ॥ 25, ಸ್ಯ 1907.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ಪ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕ ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರಿಜಿಸ್ಟ್ರೇಷ್ ವ ಎಜ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಪೆಲ್ಯೂಟಿ ಕಮ್ಮಿಷನರುಗಳು, ಸಬಾಡಿವಿಜನೇಟ್ ಜಡ್ಜಿರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸುಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷ್ಯನ್‌ಗಳು ಮತ್ತು ಅವುಗಳಿಂತೆ ಆದ್ದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 3ನೆ ಏಪ್ರಿಲ್ 1907.

ನಂ. 9176—ಸ್ಯಾನಿಟರಿ 141-06—10, ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ಸಬ್ ತಾಲ್ಲೂಕಿನ ರಾಮಪುರ ಗ್ರಾಮದಲ್ಲಿ ಶ್ರೀ ವೆಂಕಟರಮಣಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗ್ಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ನೆಂಬ ಸಾಂಕ್ರಾಮಿಕ ಜ್ವಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರು, 1907ನೆಯ ವರ್ಷದ ಏಪ್ರಿಲ್ 27ನೆ ತಾರೀಖಿನಿಂದ 1907ನೆ ಮೇ 2ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.